# ಸಮೃದ್ಧಿಯ ಕುರಿತಾದ ಬೈಬಲ್ ವಚನಗಳು

• ...ಅವನು ಯೆಹೋವನನ್ನು ಆಶ್ರಯಿಸಿದಷ್ಟೂ ಕಾಲ ದೇವರು ಅವನಿಗೆ ಸಫಲತೆಯನ್ನು ದಯಪಾಲಿಸಿದನು. **೨ ಪೂರ್ವಕಾಲವೃತ್ತಾಂತ 26:5**

• ದೇವರು ನಿನಗೆ ಆಕಾಶದ ಇಬ್ಬನಿಯನ್ನೂ ಭೂಮಿಯ ಸಾರವನ್ನೂ ಬಹಳ ಧಾನ್ಯ ದ್ರಾಕ್ಷಾರಸಗಳನ್ನೂ ಅನುಗ್ರಹಿಸಲಿ. **ಆದಿಕಾಂಡ 27:28**

• ಯೆಹೋವನು ನಿನಗೋಸ್ಕರ ತನ್ನ ಶ್ರೇಷ್ಠವಾದ ಭಂಡಾರವೆಂಬ ಆಕಾಶವನ್ನು ತೆರೆದು, ನಿನ್ನ ದೇಶಕ್ಕೆ ತಕ್ಕ ಕಾಲದಲ್ಲಿ ಮಳೆಯನ್ನು ಕೊಡುವನು; ಮತ್ತು ನೀನು ಮಾಡುವ ಎಲ್ಲಾ ಕೆಲಸಗಳನ್ನು ಆಶೀರ್ವದಿಸುವನು. ನೀನು ಅನೇಕ ಜನಾಂಗಗಳಿಗೆ ಸಾಲ ಕೊಡುವವನಾಗುವಿಯೇ ಹೊರತು ಸಾಲ ತೀರಿಸುವವನಾಗುವುದಿಲ್ಲ.
**ಧರ್ಮೋಪದೇಶಕಾಂಡ 28:12**

• ಆತನು ಅವರನ್ನು ಬೆಳ್ಳಿಬಂಗಾರಗಳೊಡನೆ ಹೊರಗೆ ಕರಕೊಂಡು ಬಂದನು; ಅವರ ಗೋತ್ರಗಳಲ್ಲಿ ಒಬ್ಬನಾದರೂ ಬಲಹೀನನಾಗಿರಲಿಲ್ಲ. **ಕೀರ್ತನೆಗಳು 105:37**

• ಯೆಹೋವನ ಆಶೀರ್ವಾದವೇ ಐಶ್ವರ್ಯವನ್ನು ಕೊಡುತ್ತದೆ; ಆತನು ಅದಕ್ಕೆ ಯಾವ ದುಃಖವನ್ನೂ ಜೋಡಿಸುವುದಿಲ್ಲ. **ಜ್ಞಾನೋಕ್ತಿಗಳು 10:22**

• ಆದಕಾರಣ ಈಗ ಹೆದರಬೇಡಿರಿ; ನಾನು ನಿಮ್ಮನ್ನೂ ನಿಮ್ಮ ಮಕ್ಕಳನ್ನೂ ಪೋಷಿಸುವೆನು. **ಆದಿಕಾಂಡ 50:21**

• ...ನಿಮ್ಮಲ್ಲಿ ದರಿದ್ರರು ಯಾರೂ ಇರಬಾರದು; ಏಕೆಂದರೆ ನಿಮ್ಮ ದೇವರಾದ ಯೆಹೋವನು ನಿಮಗೆ ಸ್ವಾಸ್ತ್ಯವಾಗಿ ಉಡುಗೊರೆಯಾಗಿ ಕೊಡುವ ದೇಶದಲ್ಲಿ ಆತನು ನಿಮ್ಮನ್ನು ಉನ್ನತವಾಗಿ ಆಶೀರ್ವದಿಸುವನು. **ಧರ್ಮೋಪದೇಶಕಾಂಡ 15:4**

• ನಿಮ್ಮ ದೇವರಾದ ಯೆಹೋವನನ್ನೇ ನೆನಪಿನಲ್ಲಿಟ್ಟುಕೊಳ್ಳಬೇಕು; ಏಕೆಂದರೆ ಆತನು ನಿಮ್ಮ ಪಿತೃಗಳಿಗೆ ಆಣೆ ಇಟ್ಟು ಮಾಡಿದ ತನ್ನ ಒಡಂಬಡಿಕೆಯನ್ನು ಇಂದು ಸ್ಥಾಪಿಸುವುದಕ್ಕೋಸ್ಕರ, ನಿಮಗೆ ಐಶ್ವರ್ಯವನ್ನು ಗಳಿಸುವ ಶಕ್ತಿಯನ್ನು ಕೊಡುವವನಾಗಿದ್ದಾನೆ. **ಧರ್ಮೋಪದೇಶಕಾಂಡ 8:18**

• ದೇವರು ಯಾವ ಮನುಷ್ಯನಿಗೆ ಧನಧಾನ್ಯಗಳನ್ನೂ ಐಶ್ವರ್ಯವನ್ನೂ ಕೊಟ್ಟು, ಅದನ್ನು ಅನುಭವಿಸುವುದಕ್ಕೂ ತನ್ನ ಪಾಲನ್ನು ಪಡೆದು ತನ್ನ ಶ್ರಮದಲ್ಲಿ ಆನಂದಿಸುವುದಕ್ಕೂ ಶಕ್ತಿಯನ್ನು ನೀಡಿದ್ದಾನೋ, ಅದು ದೇವರ ದಾನವೇ ಆಗಿದೆ. **ಪ್ರಸಂಗಿ 5:19-20**

• ...ನಾವು ಬೆಂಕಿ ಮತ್ತು ನೀರಿನ ಮೂಲಕ ಹಾದುಹೋದೆವು, ಆದರೆ ನೀನು ನಮ್ಮನ್ನು ಸಮೃದ್ಧಿಯ ಸ್ಥಳಕ್ಕೆ ಕರೆತಂದಿದ್ದೀ. **ಕೀರ್ತನೆಗಳು 66:12**

• ಈಗ ನನ್ನ ಮಗನೇ, ಯೆಹೋವನು ನಿನ್ನ ಸಂಗಡ ಇರಲಿ; ಆತನು ನಿನ್ನನ್ನು ಸಫಲಗೊಳಿಸಲಿ ಮತ್ತು ಆತನು ನಿನ್ನ ಕುರಿತು ಹೇಳಿದಂತೆ ನಿನ್ನ ದೇವರಾದ ಯೆಹೋವನ ಆಲಯವನ್ನು ನೀನು ಕಟ್ಟು. **೧ ಪೂರ್ವಕಾಲವೃತ್ತಾಂತ 22:11**

• ಪರಲೋಕದ ದೇವರು ನಮ್ಮನ್ನು ಸಫಲಗೊಳಿಸುವನು; ಆದ್ದರಿಂದ ಆತನ ಸೇವಕರಾದ ನಾವು ಎದ್ದು ಕಟ್ಟುವೆವು. **ನೆಹೆಮೀಯ 2:20**